ಸಹಕಾರಿ ವ್ಯವಸ್ಥೆ ಅಡಿಬರುವ ಸಕ್ಕರೆ ಕಾರ್ಖಾನೆಯ ಪುನಶ್ಚೇತನ :

5544 ಶ್ರೀ ರಘುಪತಿ ಭಟ್ ಕೆ (ಉಡುಪಿ) :– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷದಿಂದ ಸಹಕಾರಿ ವ್ಯವಸ್ಥೆ ಅಡಿಯಲ್ಲಿ ಸಕ್ಕರೆ ಕಾರ್ಖಾನೆಗಳ ಪುನಃಶ್ಚೇತನಕ್ಕೆ ನೀಡಿದ ಬಿಡುಗಡೆ ಮಾಡಲಾದ ಸಹಾಯ ಧನವೆಷ್ಟು (ವಿವರ ಒದಗಿಸುವುದು);

ಆ) ಈ ಹಿಂದೆ ಭರವಸೆ ನೀಡಿದಂತೆ ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಬಿಡುಗಡೆ ಮಾಡಲು ಬಾಕಿ ಇರುವ ಅನುದಾನ ಎಷ್ಟು; ಬಿಡುಗಡೆಯಾಗದಿರಲು ಕಾರಣವೇನು;

ಇ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯ ಪುನಃಶ್ಚೇತನಕ್ಕೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ, ನೌಕರರಿಗೆ, ಸಹಕಾರಿ ಸಂಸ್ಥೆಗಳಿಗೆ ಪಾವತಿಸಬೇಕಾದ ಬಾಕಿ ಹಣವೆಷ್ಟು; ಯಾವಾಗ ಪಾವತಿಸಲಾಗುವುದು;

ಉ) ಬ್ರಹ್ಮಾವರ ಸಕ್ಕರೆ ಕಾರ್ಖಾನೆಗೆ ಕಬ್ಬು ಬೆಳೆದ ರೈತರಿಗೆ ಹಣ ಪಾವತಿಸುವವರೆಗೆ ಬಡ್ಡಿ ಮನ್ನಾ ಯೋಜನೆಯನ್ನು ವಿಸ್ತರಿಸಲಾಗುವುದೆ?

ಶ್ರೀ ಆರ್.ವಿ. ದೇಶಪಾಂಡೆ (ಸಹಕಾರ ಸಚಿವರು) :

ಅ) ಸರ್ಕಾರವು ಕಳೆದ ಎರಡು ವರ್ಷಗಳಲ್ಲಿ ಈ ಕೆಳಕಂಡ ಸಹಕಾರಿ ಸಕ್ಕರೆ ಕಾರ್ಖಾನೆಗಳಿಗೆ ಕಬ್ಬು ಬಿಲ್ ಪಾವತಿಗಾಗಿ ಮೃದು ಸಾಲವನ್ನು ನೀಡಿರುತ್ತದೆ. ವಿವರ ಈ ಕೆಳಕಂಡಂತಿದೆ.

2003–04	ದಕ್ಷಿಣ ಕನ್ನಡ ಸಸಕಾ ಪಾಂಡವಪುರ ಸಸಕಾ ಆಳಂದ್ ಸಸಕಾ	192.00 330.00 300.00
2004–05	ಆಳಂದ್ ಸಸಕಾ	100.00
	ಒಟ್ಟು	**922.00**

ಆ) ಸರ್ಕಾರವು ಆದೇಶ ಸಂಖ್ಯೆ : ಸಿಎಂಡಬ್ಲ್ಯೂ 71 ಸಿಒಎಫ್ 2002, ದಿನಾಂಕ : 16–4–2003 ರನ್ವಯ ರೂ.1.92 ಕೋಟಿಗಳನ್ನು ಕಬ್ಬು ಬಿಲ್ ಪಾವತಿಗಾಗಿ ಮಂಜೂರು ಮಾಡಿ ಬಿಡುಗಡೆ ಮಾಡಿರುತ್ತದೆ. ಉಳಿದ ಮೊತ್ತ ರೂ.3.10 ಕೋಟಿಗಳನ್ನು ಮಂಜೂರು ಮಾಡುವ ಹಂತದಲ್ಲಿ ಸರ್ಕಾರ ಅವನತ್ತಿನಲ್ಲಿರುವ ಸಹಕಾರಿ ಸಕ್ಕರೆ ಕಾರ್ಖಾನೆಗಳ ಪುನಃಶ್ಚೇತನಕ್ಕಾಗಿ ರಚಿಸಿದ್ದ ಸಚಿವ ಸಂಪುಟದ ಉಪ ಸಮಿತಿಯು ತನ್ನ ವರದಿಯನ್ನು ಮಂಡಿಸಿದ ಹಿನ್ನೆಲೆಯಲ್ಲಿ ಹಾಗೂ ಈ ದಿಶೆಯಲ್ಲಿ ಸಚಿವ ಸಂಪುಟದ ತೀರ್ಮಾನವನ್ನು

ನಿರೀಕ್ಷಿಸಲಾಗುತ್ತಿದೆ. ಸರ್ಕಾರದ ಆದೇಶ ಸಂ: ಸೆ 333 ಸಸಕಾ 2003, ದಿನಾಂಕ : 9-2-2005 ರಲ್ಲಿ ಕಾರ್ಖಾನೆಗೆ ಸೇರಿದ ಜಮೀನನ್ನು ಮಾರಾಟ ಮಾಡಲು ಅನುಮತಿಸಲಾಗಿದೆ. ಜಮೀನು ಮಾರಾಟದಿಂದ ಬಂದ ಹಣವನ್ನು ಕಾರ್ಖಾನೆಯ ತುರ್ತು ಪಾವತಿಗಳಿಗೆ ಸಂಬಂಧಿಸಿದಂತೆ ಉಪಯೋಗಿಸಲು ಆದೇಶ ಮಾಡಲಾಗಿದೆ.

ಇ) ಈ ಕಾರ್ಖಾನೆಯ ಪುನಃಶ್ಚೇತನಕ್ಕೆ ತೆಗೆದುಕೊಳ್ಳಬೇಕಾದ ಕ್ರಮದ ಬಗ್ಗೆ ಪರಿಶೀಲಿಸಿ ಉಡುಪಿ ಜಿಲ್ಲಾಧಿಕಾರಿಗಳು ವರದಿ ನೀಡಿರುತ್ತಾರೆ. ಈ ಮಧ್ಯೆ ಅವನತಿಯಲ್ಲಿರುವ ಸಕ್ಕರೆ ಕಾರ್ಖಾನೆಗಳನ್ನು ಗುತ್ತಿಗೆ ನೀಡುವ ಸಂಬಂಧ ಮಾನ್ಯ ಉಪ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟದ ಸಮಿತಿಯನ್ನು ರಚಿಸಲಾಗಿದ್ದು, ಉಪ ಸಮಿತಿಯ ತೀರ್ಮಾನವನ್ನು ನಿರೀಕ್ಷಿಸಲಾಗುತ್ತಿದೆ.

ಈ) ಕಾರ್ಖಾನೆಯು ರೈತರಿಗೆ, ನೌಕರರಿಗೆ ಮತ್ತು ಸಹಕಾರ ಸಂಸ್ಥೆಗಳಿಗೆ ಪಾವತಿಸಬೇಕಾಗಿರುವ ಹಣದ ವಿವರ ಈ ಕೆಳಕಂಡಂತಿದೆ.

1	ರೈತರಿಗೆ	312.00
2	ನೌಕರರಿಗೆ	270.00
3	ಸಹಕಾರ ಸಂಸ್ಥೆಗಳಿಂದ ಪಡೆದ ಠೇವಣಿ ಹಣ	717.42
	ಒಟ್ಟು ಮೊತ್ತ	**1299.75**

ಸಚಿವ ಸಂಪುಟದ ಉಪಸಮಿತಿಯು ಕಾರ್ಖಾನೆಯ ಪುನಶ್ಚೇತನದ ವಿಷಯವಾಗಿ ಕೈಗೊಳ್ಳುವ ತೀರ್ಮಾನದನ್ವಯ ಕ್ರಮವಹಿಸಲಾಗುವುದು.

ಉ) ಬಡ್ಡಿ ಮನ್ನಾ ಮಾಡುವ ಯೋಜನೆ ಸೆಪ್ಟೆಂಬರ್ 2005ರ ಅಂತ್ಯದವರೆಗೂ ವಿಸ್ತರಿಸಲಾಗಿದೆ.

<u>ಡಿ.ಸಿ.ಸಿ ಬ್ಯಾಂಕು ಹಾಗೂ ಸಹಕಾರ ಬ್ಯಾಂಕುಗಳು</u> :

453 (5124) ಶ್ರೀ ಬಿ.ಆರ್. ಪಾಟೀಲ್ (ಆಳಂದ್) :- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಡಿ.ಸಿ.ಸಿ ಬ್ಯಾಂಕುಗಳು ಹಾಗೂ ಸಹಕಾರ ಬ್ಯಾಂಕುಗಳು ಮಾಡುವ ಕೆಲಸಗಳ ಗುರಿ ಹಾಗೂ ಉದ್ದೇಶ ಒಂದೇ ರೀತಿಯಾಗಿದ್ದು ಅವುಗಳನ್ನು ಒಂದೂಗೂಡಿಸುವ ಯೋಜನೆ ಸರ್ಕಾರಕ್ಕಿದೆಯೇ;